(... ಬಿ.ಎಂ.)

7) ಚನ್ನಪಟ್ಟಣ ಮುನ್ಸಿಪಲ್ ಕೌನ್ಸಿಲ್‌ನ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುವುದು

Sri Sadat Ali Khan (Channapatna): The then Hon'ble Minister for Housing and Urban Development promised and announced at a felicitation function of Town Municipal Council, Channapatna on dated 29-8-1990 announcing an immediate release of development grant of Rs.10 lakhs within a few days, inview of the very bad financial condition of Channapatna, TMC. It has already six months have passed still the amount of Rs.10 lakhs is not released, keeping the TMC Channapatna without any development work since last six months. Further, the financial condition of the TMC is so bad that they are not able to pay even the salaries for the month of February 1991. Inview of this critical financial condition, I request through you Sir to the State Government to release the development grant immediately to enable the Municipality to take up the developmental work.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಚನ್ನಪಟ್ಟಣ ಪುರಸಭೆಗೆ 1990-91ನೇ ಸಾಲಿಗೆ ಅನುದಾನ ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು ಸದ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು. 1990-91ನೇ ಸಾಲಿನಲ್ಲಿ ಚನ್ನಪಟ್ಟಣ ಮುನಿಸಿಪಾಲಿಟಿಯ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೋಸ್ಕರ ಹಾಗೂ ಸಿಬ್ಬಂದಿಯ ವೇತನಕ್ಕೋಸ್ಕರ ಜಕಾತಿ ಅನುದಾನವಾಗಿ ಒಟ್ಟು 14,35,614 ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 4ನೇ ಕಂತಿನ ರೂಪಾಯಿ 4,78,538ನ್ನು ಸದ್ಯದಲ್ಲಿ ಬಿಡುಗಡೆ ಮಾಡಲಾಗುವುದು.

8) ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರುಗಳನ್ನು ನೇಮಕ ಮಾಡುವುದು

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಅಧ್ಯಕ್ಷರೇ, ಮಂಗಳೂರು ತಾಲ್ಲೂಕಿನ ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರ ಸುಮಾರು ಒಂದು ಲಕ್ಷಕ್ಕೂ ಮಿಕ್ಕಿದ ಜನರಿಗೆ ಸೇವೆ ನೀಡುತ್ತಿದೆ. ಇದೀಗ ಈ ಕೇಂದ್ರದಲ್ಲಿ ಒಬ್ಬರೇ ಡಾಕ್ಟರರು ಇದ್ದಾರೆ. ಇಲ್ಲಿಗೆ ಇನ್ನೂ ಎರಡು ಜನ ಹೆಚ್ಚಿಗೆ ಡಾಕ್ಟರರುಗಳನ್ನು ನೇಮಕ ಮಾಡಬೇಕಾಗಿದೆ. ಈ ಹಿಂದೆಯೂ ಕೂಡ ಈ ಕೇಂದ್ರದಲ್ಲಿ ಮೂವರು ಡಾಕ್ಟರರು ಇದ್ದರು. ಇಲ್ಲಿ ಈಗ ಒಬ್ಬರೇ ಡಾಕ್ಟರರು ಇರುವುದರಿಂದ ಜನರಿಗೆ ತುಂಬಾ ಕಷ್ಟವಾಗಿರುತ್ತದೆ. ಅಲ್ಲದೆ ಈ ಆಸ್ಪತ್ರೆಗೆ ಔಷಧಿ ಪೂರೈಕೆ ಕೂಡ ಸಾಕಷ್ಟು ಆಗಿಲ್ಲ.

ಆದಕಾರಣ ಈ ಆಸ್ಪತ್ರೆಗೆ ಒಬ್ಬರು ಮಹಿಳಾ ಡಾಕ್ಟರರನ್ನು ಮತ್ತು ಒಬ್ಬರು ಡಾಕ್ಟರರನ್ನು ಅತೀ ಶೀಘ್ರ ನೇಮಕ ಮಾಡಬೇಕು. ಅದೇ ರೀತಿ ಸಾಕಷ್ಟು ಔಷಧಿ ಪೂರೈಕೆಯನ್ನು ಕೂಡಾ ಒದಗಿಸಿಕೊಡಬೇಕು. ಈ ಕುರಿತು ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ವಿದ್ಯಾ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಆರೋಗ್ಯ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡಲಿಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರ, ಉಳ್ಳಾಲ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಎರಡು ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದೆ. ಮೂರನೇ ಹುದ್ದೆ ಈ ಹಿಂದೆ ಮಂಜೂರು ಆಗಿದ್ದು ಅದನ್ನು ಸಮುದಾಯ ಆರೋಗ್ಯ ಮಾರ್ಗದರ್ಶಿ ಹುದ್ದೆ ಅದನ್ನು ಈಗ ವಜಾ ಮಾಡಲಾಗಿದೆ. ಪುರುಷ ವೈದ್ಯರು ಅಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಮಹಿಳಾ ವೈದ್ಯರುಗಳ ಹುದ್ದೆ ಖಾಲಿ ಇತ್ತು. ಆಯ್ಕೆಗೊಂಡ ವೈದ್ಯರ ಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ದಿನಾಂಕ:2-2-91ರಂದು ಪಡೆಯಲಾಗಿದೆ. ಮುಖ್ಯ ಆಯ್ಕೆಪಟ್ಟಿಯಲ್ಲಿ 82 ಮಹಿಳಾ ವೈದ್ಯರು ಮತ್ತು ಹೆಚ್ಚಿನ ಆಯ್ಕೆಪಟ್ಟಿಯಲ್ಲಿ 36ಮಹಿಳಾ ವೈದ್ಯರುಗಳು ಆಯ್ಕೆಯಾಗಿದ್ದಾರೆ. ಪೊಲೀಸ್ ವೆರಿಫಿಕೇಷನ್ ಮತ್ತು ವೈದ್ಯಕೀಯ ತಪಾಸಣೆ ಆದಕೂಡಲೇ ಒಬ್ಬ ಮಹಿಳಾ ವೈದ್ಯಾಧಿಕಾರಿಯನ್ನು ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆದ್ಯತೆಮೇರೆಗೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಔಷಧಿಗಾಗಿ ರೂ.30,000 (ಮೂವತ್ತು ಸಾವಿರ) ರೂಪಾಯಿ ಅನುದಾನ ಇದ್ದು ಹಿಂದಿನ ವರ್ಷ ಮತ್ತು ಈ ವರ್ಷವೂ ಕೂಡಾ ಈಗಾಗಲೇ ಜಿಲ್ಲಾ ಪರಿಷತ್ತಿನ ಮತಿಯಿಂದ ಒದಗಿಸಲಾಗಿದೆ.

9) ಮೂಡಿಗೆರೆ ತಾಲ್ಲೂಕಿನ ಆರೋಗ್ಯ ಇಲಾಖೆಯ ಕಟ್ಟಡಗಳ ದುರಸ್ಥಿ

ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನ ಬಹುತೇಕ ಆರೋಗ್ಯ ಇಲಾಖೆಯ ಕಟ್ಟಡಗಳು ನಾದುರಸ್ಥಿಯಲ್ಲಿದ್ದು, ಈ ಸಾರಿ ಭಾರೀ ಮಳೆಯಿಂದಾಗಿ ಬಹಳ ಶಿಥಿಲವಾಗಿದ್ದು, ಜಾವಳಿ ಆಸ್ಪತ್ರೆಯ ಕಟ್ಟಡ, ಬಾಳಿಹೊಳೆ ಆಸ್ಪತ್ರೆ ಕಟ್ಟಡ, ದಾದದಳ್ಳಿ ಆಸ್ಪತ್ರೆ ಕಟ್ಟಡ ಯಾವಾಗ ಡಾಕ್ಟರ್ ಹಾಗೂ ಅಲ್ಲಿನ ಸಿಬ್ಬಂದಿಯ ತಲೆಮೇಲೆ ಬೀಳುತ್ತದೆಯೋ ಗೊತ್ತಿಲ್ಲ. ಹಾಗೆಯೇ ಸಿಬ್ಬಂದಿ ವರ್ಗದವರ ಕ್ವಾರ್ಟರ್ಸ್‌ಗಳು ಸಹಾ ವಾಸಮಾಡಲು ಯೋಗ್ಯವಾಗಿಲ್ಲ, ಗೋಡೆಗಳು ಬಿದ್ದುಹೋಗಿರುತ್ತವೆ, ಮತ್ತು ಸೋರುತ್ತಿದೆ. ಸುಣ್ಣ ಬಣ್ಣ ಹೊಡದು ಹತ್ತಾರು ವರ್ಷಗಳಾಗಿರುತ್ತವೆ. ಈ ಪರಿಸ್ಥಿತಿ ಇಡೀ ಆರೋಗ್ಯ ಇಲಾಖೆಗೆ ಅವಮಾನಕರ. ಆದುದರಿಂದ ದಯಮಾಡಿ ಮುಂದಿನ ಮಳೆಗಾಲ ಪ್ರಾರಂಭವಾಗುವ ಮೊದಲೇ ಇಲಾಖೆಯ ಒಟ್ಟು ಉಳಿತಾಯ ಹಣದಲ್ಲಿ ಸ್ಪೆಷಲ್ ಆಗಿ ಮೂಡಿಗೆರೆ ತಾಲ್ಲೂಕಿಗೆ ಹಣಕೊಟ್ಟು ಆರೋಗ್ಯ ಇಲಾಖೆಯ ಕಟ್ಟಡಗಳನ್ನು ರಿಪೇರಿ ಮಾಡಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ವಿದ್ಯಾ ಸಚಿವರು): ಮಾನ್ಯ ಅಧ್ಯಕ್ಷರೇ, ಆರೋಗ್ಯ ಸಚಿವರ ಪರವಾಗಿ ನಾನು ಈ ಹೇಳಿಕೆಯನು ಕೊಡಲಿಕ್ಕೆ ಅನುಮತಿಯನ್ನು ಕೇಳುತ್ತಿದ್ದೇನೆ.

ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನವರು ಈ 90-91ನೆಯ ಆರ್ಥಿಕ ಸಾಲಿಗೆ ಆರೋಗ್ಯ ಇಲಾಖೆಯ ಕಟ್ಟಡಗಳ ಮಾರ್ಪಾಡು ಮತ್ತು ಹೆಚ್ಚುವರಿ ಪೂರೈಕೆಗೆ ವಾರ್ಷಿಕ ಯೋಜನೆಯಲ್ಲಿ ಆರ್ಥಿಕ ಅನುದಾನವನ್ನು ಒದಗಿಸಿರುವುದಿಲ್ಲ. ಆದ್ದರಿಂದ ಈ ಕಾಮಗಾರಿಗಳನ್ನು (ದುರಸ್ಥಿ ಸೇರಿ) ಪೂರೈಸಲು ಸಾಧ್ಯವಾಗಿಲ್ಲ. ಮುಂದಿನ ಆರ್ಥಿಕ ಸಾಲಿನಲ್ಲಿ ಈ ಬಗ್ಗೆ ವಿಶೇಷ ಗಮನಹರಿಸಲು ಚಿಕ್ಕಮಗಳೂರು ಜಿಲ್ಲಾ ಪರಿಷತ್ತುಗಳಿಗೆ ಸೂಚನೆ ಕೊಡಲಾಗುವುದು.

ಈ ಕಟ್ಟಡಗಳ ದುರಸ್ಥಿಗಾಗಿ, ಜಿಲ್ಲಾಪರಿಷತ್, ಚಿಕ್ಕಮಗಳೂರು ಇವರ ಇಂಜಿನಿಯರಿಂಗ್ ವಿಭಾಗದಿಂದ ಮಾಹಿತಿ ತರಿಸಿ ಇದಕ್ಕೆ ಅನುಗುಣವಾಗಿ ಆದ್ಯತೆಯಮೇಲೆ ಈ ಕೆಲಸಗಳನ್ನು ಮಳೆಗಾಲಕ್ಕೆ ಮುಂಚಿತವಾಗಿ ಪೂರೈಸಲು ಸೂಚನೆ ಕೊಡಲಾಗುವುದು.